ಕಥೆ

# ಗೆಜ್ಜೆಟೀಕಿ ಮುತ್ತಿನ ಬುಗುಡಿ



**ಮೈತ್ರೇಯಿಣಿ ಗದಿಗೆಪ್ಪಗೌಡರ**

ಕಲೆ: ಮುರಳೀಧರ್ ರಾಥೋಡ್



‘ಓಣ್ಯಾನ ನೆರೆಹೊರೆಯರಿಗೆ ಅಕ್ಕ ತಂಗಿಯಂಗ ಇದ್ದಿ, ನಿನ್ನ ಬಾಳೆಕ ನೀ ಭಾಳ ಶ್ಯಾಣಾ ಇದ್ದಿ, ಎಲ್ಲಾರ ಅನುಆಪತ್ತಿಗೆ ಗೆಳತಿಯಂಗ ಇದ್ದಿ ಯವ್ವಾ. ಸುಗುಣಿ ಸಾವಂತ್ರಿ ನೀ ಪತಿವ್ರತಾ ಧರ್ಮ ಪಾಲಿಸಿದಂತಾಕಿ. ಗಂಡ–ಭಾವಮೈದುನರಿಗೆ ಅಂಜಿ–ಅಳುಕಿ ಬಾಳೆ ಮಾಡಿ, ನಾಕು ಮಂದ್ಯಾಗ ಹೌದು ಆದಾಕಿನ ನಮ್ಮವ್ವ, ಯಾರರ ಏನರ ಅಂದರೂ ಹೊಟ್ಯಾಗ ಹಾಕ್ಕೊಂಡು, ಕ್ಷಮಿಸಿ ನಿನ್ನ ದೊಡ್ಡಗುಣ ಮೆರೆದಾಕಿನ ನಮ್ಮವ್ವಾ, ನಮ್ಮ ಸಾವಂತ್ರಿ ಅಂದ್ರ ಸತ್ಯವಾನ ಸಾವಂತ್ರಿ ಅಂತಾ ಎಲ್ಲಾರ ಬಾಯಾಗ ಇದ್ದಿಯವ್ವಾ. ನೀ ಆಗಾದ್ಯಾರ ಬಾಗ್ಯಾದಾರ ಏನರ ಅಂದರೂ, ನಿನ್ನ ನೆರಳಿಗೆ ಅಂಜಿ ನೀ ಬದುಕಿದಾಕಿ ನಮ್ಮವ್ವ, ಬಾಳೆದ ಬವಣೆಗೆ ಬೆಂದರೂ, ನೋವು ನುಂಗಿ ನಕ್ಕಾಕಿನ ನಮ್ಮವ್ವ, ತಲೆಮ್ಯಾಲಿನ ಸೆರಗು ಜಾರದಂಗ ಮೂವತ್ತು ವರ್ಷ ಬಾಳೆ ಮಾಡಿದ್ರ ಸಾವಂತ್ರಿ ಅಂದ್ರ ಗರತಿಗಂಗವ್ವ ಅಂತ ಹೌದ ಅನಿಸಿಕೊಂಡು ನಮ್ಮನ್ನೆಲ್ಲಾ ಬಿಟ್ಟು ಇಷ್ಟು ಲಗೂಟನ ಹೊಂಟೆಲ್ಲಾ... ಇದು ಭಾಳ ಅನ್ಯಾಯ ಆತು’

–ಹಿಂಗ ಒಂದೇ ಸವನ ದೊಡ್ಡ ದನಿತೆಗದು ಗೂಟಕ್ಕೆ ಕುಂತ ಶೆಟ್ಟರ ಹೆಂಡತಿ ಸಾವಂತ್ರಿಯ ಹೆಣದ ಮುಂದ ಆಕಿ ಆಪ್ತ ಗೆಳತಿ ಈರಮ್ಮ ಎದಿ ಎದಿ ಬಡಕೊಂಡು ಅಳಾಕತ್ತಿದ್ಲು.

ನೇಸರಗಿ ಊರ ಹಿರಿಯನಾದ ಚೆಂಬಣ್ಣ ಶೆಟ್ರು, ಪ್ರೀತಿಯ ಹೆಂಡತಿ ಸಾವಂತ್ರಿನ ಕಳಕೊಂಡು ಗರ ಬಡಿದವರಂಗ ಬಾಕಲದಾಗ ಕುಂತಿದ್ರು. ಮಗ ಊರತುಂಬ ಸುದ್ದಿ ಮುಟ್ಟಿಸಿ ಅವ್ವನ ಅಂತ್ಯಸಂಸ್ಕಾರಕ್ಕ ತಯಾರಿ ಮಾಡಾಕತ್ತಿದ್ದ. ಸೊಸಿ ಮಾತ್ರ ಒಳಗೊಳಗ ಈ ಪೀಡಾ ಇಷ್ಟು ಲಗೂನ ಮಣ್ಣಗಾಣತಲ್ಲಾ ಅಂತಾ ಖುಷಿ ಪಡತಾ, ನೋಡವ್ರ ಏನರ ಅಂದಾರಂತ ಹೆಣದ ಮಗ್ಗಲಕ ಡೊಳ್ಳಾರಿಮ್ಯಾಲ ಕುಂತ ಸಣ್ಣದನಿಲೇ, ‘ಅತ್ತೆವ್ವಾ ನೀ ಹಿಂಗ ನಡಬರಕ ನಮ್ಮನ್ನ ಬಿಟ್ಟು ಹೊದರ ಹೆಂಗಬೇ ನಮ ಬಾಳೆ, ಅಂತಾ ಅಳಾಕತ್ತಿದ್ಲು. ಅತ್ತಿ ಬದುಕಿರುವಾಗ ಒಂದು ದಿನಾನು ಪ್ರೀತಿಯಿಂದ ನಡಕೊಳ್ಳದ ಸೊಸಿ ಮಂದಿಮುಂದ ಸೋಗಹಾಕಿ ಅಳತಾ ಇದ್ಲು. ಮನ್ಯಾಗ ಅತ್ತಿ ಸಾವಂತ್ರಿಯ ಮಾತುಗಳನ್ನೇ ಎಲ್ಲಾರೂ ಚಾಚು ತಪ್ಪದ ಕೇಳೋದು ಕಮಲವ್ವನ ಅಸಮಾಧಾನಕ್ಕ ಕಾರಣ ಆಗಿತ್ತು. ನೋಡೋವ್ರ ಮುಂದ ತನ್ನ ಮಾನ ಹೋಗಬಾರದು ಅಂತಾ ಜನನಿಮಿತ್ತ್ಯಕ ಕಣ್ಣೀರು ಹಾಕತಾ ಇದ್ಲು. ತಾನು ಎರಡು ಮಕ್ಕಳ ತಾಯಿ ಆದರೂ ಮನ್ಯಾಗ ಎಲ್ಲಾ ದಗದಾ ಮಾಡೋದು ಬಿಟ್ರ ಹಿರಿತನ ಮಾತ್ರ ಅತ್ತಿ ಕೈಯಾಗ ಇದ್ದದ್ದು ಒಳಗೊಳಗ ಆಗಾಗ ಕೊರಿತಿತ್ತು. ಹೊಲಮನಿ ವ್ಯವಹಾರ ತನ್ನ ಮಾವ ಮತ್ತು ಗಂಡ ನೋಡಿಕೊಳ್ಳತಿದ್ರ,